(ಇಂದು ದಿನಾಂಕಃ 23–09–2024 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

ಪಾಟೀಸವಾಲು ಃ ಶ್ರೀ ಆರ ಎಂ ಆರ್ ವಕೀಲರಿಂದ ಃ

ಖಿನ್ನೂರು ನಲ್ಲಿ 40-45 ಮನೆಗಳು ಇದ್ದು ಅದು ಒಂದು ಸಣ್ಣ ಹಳ್ಳಿ ಎಂದರೆ ಸರಿ. ಅಂತೂರು ಬೆಂತೂರು ಬೇರೆ ಬೇರೆ ಗ್ರಾಮ ಎಂದರೆ ಸರಿ. ಸದರಿ ಗ್ರಾಮಗಳು ಹೊಂದಿಕೊಂಡು ಇದ್ದ ಕಾರಣ ಸಾಮಾನ್ಯವಾಗಿ ಅದನ್ನು ಅಂತೂರು-ಬೆಂತೂರು ಎಂದು ಕರೆಯುತ್ತಾರೆ ಎಂದರೆ ಸರಿ. ನನ್ನ ತವರೂ ಮನೆ ಬೆಂತೂರು. ಬೆಂತೂರು ಸಣ್ಣ ಗ್ರಾಮ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅದು ಒಂದು ದೊಡ್ಡ ಊರು ಎಂದು ನುಡಿಯುತ್ತಾರೆ. ಬೆಂತೂರುನಲ್ಲಿ ಎಷ್ಟು ಮನೆಗಳು ಇವೆ ಎಂದು ನನಗೆ ಗೊತ್ತಾಗುವುದಿಲ್ಲ.

ನನ್ನ ತಂದೆ ತಾಯಿಗೆ ನನ್ನನ್ನು ಸೇರಿಸಿ 06 ಜನ ಹೆಣ್ಣುಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳು. ಸಾಕ್ಷಿಯು ಮುಂದುವರೆದು ಒಬ್ಬ ಗಂಡು ಮಗ ಮತ್ತು 04 ಹೆಣ್ಣುಮಕ್ಕಳು ಮರಣ ಹೊಂದಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಮತ್ತು ರೇಣವ್ವ ಜೀವಂತ ಇರುತ್ತೇವೆ.

1995 ರಲ್ಲಿ ನನ್ನ ಗಂಡನಾದ ಎದುರುದಾರ ನನಗೆ ಒಂದು ನೋಟಿಸನ್ನು ಕಳುಹಿಸಿರುತ್ತಾನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಅದನ್ನು ಸ್ವೀಕರಿಸಲಿಲ್ಲ ಎಂದು ನುಡಿಯುತ್ತಾರೆ. ನೋಟಿಸ ನೀಡಿದ ನಂತರದಲ್ಲಿ ನಾನು ಎದುರುದಾರನ ಸಂಗಡ ಜೀವನ ಸಾಗಿಸಲು ಆತನ ಮನೆಗೆ ಹೋಗಿಲ್ಲ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಹೋಗಿರುತ್ತೇನೆ ಅಲ್ಲಿ ಹೋದ ನಂತರ ನನಗೆ ಒಂದು ಗಂಡು ಮಗು ಹುಟ್ಟಿರುತ್ತಾನೆ. ಸದರಿ ಮಗು ಹುಟ್ಟಿದ್ದ ದಿನದಿಂದ ಅಲ್ಲಿಯೆ ವಾಸವಿರುತ್ತೇನೆ.

ಎದುರುದಾರ ಮನೆಯನ್ನು ಬಿಟ್ಟು ನನ್ನ ತವರೂ ಮನೆಯಲ್ಲಿ ವಾಸ ಮಾಡಿ ಈಗ ಸುಮಾರು 08 ವರ್ಷಗಳು ಆಗಿದೆ. ನನ್ನ ಹೆರಿಗೆ ಅಂತೂರು ಬೆಂತೂರು ಎದುರುದಾರ ಮನೆಯಲ್ಲಿ ಆಗಿರುತ್ತದೆ ಎಂದರೆ ಸರಿ. ನಾನು ಖಿನ್ನೂರು ಗ್ರಾಮದಲ್ಲಿ ವಾಸ ಮಾಡುತ್ತಿದ್ದೇನೆ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆಗಳು ಇರುವುದಿಲ್ಲ. ನಾನು ಮತ್ತು ನನ್ನ ಮಗ

ಎದುರುದಾರನ ಸಂಗಡ ಕೂಡಿ ವಾಸ ಮಾಡುತ್ತಿರುವ ಬಗ್ಗೆ ತೋರಿಸಲು ನನ್ನ ಬಳಿ ಯಾವುದೇ ದಾಖಲೆಗಳು ಇರುವುದಿಲ್ಲ.

ಅಂತೂರು ಬೆಂತೂರುನಲ್ಲಿ ವಾಸ ಮಾಡುವಾಗ ಪಡಿತರ ಚೀಟಿ ಪಡೆದುಕೊಂಡಿರುತ್ತೇನೆ. ಪಡಿತರ ಚೀಟಿಯಲ್ಲಿ ನನ್ನ ಮತ್ತು ನನ್ನ ಮಗನ ಹೆಸರು ಮಾತ್ರ ಇರುತ್ತದೆ ಎಂದರೆ ಸರಿ.

ಎದುರುದಾರರಿಗೆ 04 ಜನ ಅಣ್ಣ ತಮ್ಮಂದಿರು ಅದರಲ್ಲಿ ಹಿರಿಯನಾದ ಬಸಪ್ಪ ಮರಣ ಹೊಂದಿರುತ್ತಾನೆ. ರುದ್ರಪ್ಪನು ಎದುರುದಾರರ ತಮ್ಮನಾಗಬೇಕು. ಸದರಿ ರುದ್ರಪ್ಪನಿಗೆ ನನ್ನ ತಂಗಿಯಾದ ರೇಣವ್ವ ರವರಿಗೆ ವಿವಾಹ ಮಾಡಿರುತ್ತಾರೆ. ಸಾಕ್ಷಿಯು ಮುಂದುವರೆದು ನಮ್ಮ ವಿವಾಹವು ಕೂಡಿ ಆಗಿತ್ತು ಎಂದು ನುಡಿಯುತ್ತಾರೆ. ರುದ್ರಪ್ಪನು ಸರ್ಕಾರಿ ನೌಕರಿ ಮಾಡುತ್ತಿದ್ದ ಎಂದರೆ ಸರಿ.

ರುದ್ರಪ್ಪನಿಗೆ 04 ಜನ ಹೆಣ್ಣುಮಕ್ಕಳು ಹಾಗೂ 01 ಗಂಡು ಮಗ ಇರುತ್ತಾನೆ. ರುದ್ರಪ್ಪನು ಮತ್ತು ನನ್ನ ತಂಗಿ ಅವರ ಮಕ್ಕಳ ಸಂಗಡ ಬೇರೆ ಕಡೆ ವಾಸ ಮಾಡುತ್ತಿದ್ದಾರೆ ಎಂದರೆ ಸರಿ. ಎದುರುದಾರರಿಗೆ ಹಾಗೂ ರುದ್ರಪ್ಪನಿಗೆ ವೈಮನಸ್ಸು ಇದೆ ಎಂದರೆ ಸರಿ. ನನ್ನ ಮತ್ತು ರುದ್ರಪ್ಪನ ನಡುವೆ ಒಳ್ಳೆಯ ಬಾಂದವ್ಯ ಇದೆ ಎಂದರೆ ಸರಿ. ಮನೆಯ ಕಾರ್ಯ ಸಮಾರಂಭಕ್ಕೆ ರುದ್ರಪ್ಪನು ಮತ್ತು ನಾವು ಹೋಗಿ ಬರುವುದು ಮಾಡುತ್ತೇವೆ ಎಂದರೆ ಸರಿ.

ನನ್ನ ಮಗನ ಲಗ್ನ ಪತ್ರಿಕೆಯನ್ನು ಚಾಪಾ ಮಾಡಿಸಿರುತ್ತೇನೆ. ಸದರಿ ಲಗ್ನ ಪತ್ರಿಕೆಯಲ್ಲಿ ಶುಭಕೋರುವವರ ಭಾಗದಲ್ಲಿ ನನ್ನ ಮೈದುನನಾದ ರುದ್ರಪ್ಪನ ಹೆಸರು ನಮೂದು ಮಾಡಿರುತ್ತೇನೆ. ನನ್ನ ಮಗನ ವಿವಾಹವು ಅಂತೂರು ಬೆಂತೂರಿನ ಭೂದಿಬಸವೇಶ್ವರ ದೇವಸ್ಥಾನದಲ್ಲಿ ಆಗಿರುತ್ತದೆ.

ಇಂದು ನ್ಯಾಯಾಲಯಕ್ಕೆ ನನ್ನ ಸಂಗಡ ನನ್ನ ತಂಗಿಯಾದ ರೇಣವ್ವ ಬಂದಿರುತ್ತಾಳೆ ಎಂದರೆ ಸರಿ. ಸದರಿ ಪ್ರಕರಣವನ್ನು ರುದ್ರಪ್ಪ ಮತ್ತು ನನ್ನ ತಂಗಿಯ ಮಾತನ್ನು ಕೇಳಿ ಹೂಡಿರುತ್ತೇನೆ ಅಂದರೆ ಸರಿಯಲ್ಲ.

ನಾನು ಸಕಾರಣವಿಲ್ಲದೇ ಎದುರುದಾರರ ಸಂಗಡ ವೈವಾಹಿಕ ಜೀವನ ಸಾಗಿಸದೆ ಮದುವೆ ಮನೆ ಬಿಟ್ಟು ನಾನು ತವರೂ ಮನೆಗೆ ಬಂದು ವಾಸ ಮಾಡಿ ಎದುರುದಾರರು ಎಷ್ಟು ಕೋರಿಕೊಂಡರು ಸಹ ನಾನು ಮತ್ತು ನನ್ನ ಮಗ ಆತನನ್ನು ತೀರಸ್ಕರಿಸಿ ಈಗ ಆತನ ತಮ್ಮನಾದ ರುದ್ರಪ್ಪ ಮತ್ತು ನನ್ನ ತಂಗಿಯಾದ ರೇಣವ್ವನ ಮಾತನ್ನು ಕೇಳಿ ಎದುರುದಾರರಿಗೆ ತೊಂದರೆ ನೀಡಲು ಇಲ್ಲ ಸಲ್ಲದ ಆರೋಪವನ್ನು ಸಲ್ಲಿಸಿ ಸುಳ್ಳು ಮಾಹಿತಿಯ ಮೇರೆಗೆ ಸದರಿ ಪ್ರಕರಣವನ್ನು ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ.

ನಾನು ಎದುರುದಾರನ ಮನೆಯಿಂದ 10 ಸಾವಿರ ರೂಪಾಯಿ ನಗದು ಹಾಗೂ 05 ತೊಲೆ ಬಂಗಾರವನ್ನು ತೆಗೆದುಕೊಂಡು ಸ್ವಇಚ್ಚೆಯಿಂದ ಎದುರುದಾರನನ್ನು ತೊರೆದು ತವರೂ ಮನೆಗೆ ಬಂದಿರುತ್ತೇನೆ ಅಂದರೆ ಸರಿಯಲ್ಲ.

ಎದುರುದಾರರಿಗೆ ಸುಮಾರು 72 ವರ್ಷ ವಯಸ್ಸು ಆಗಿದ್ದು ಆತನಿಗೆ ಹೃದಯ ಶಸ್ತ್ರಚಿಕಿತ್ಸೆ ಆಗಿರುತ್ತದೆ ಅಂದರೆ ನನಗೆ ಗೊತ್ತಿಲ್ಲ. ಎದುರುದಾರ ಔಷದಿಯನ್ನು ತೆಗೆದುಕೊಂಡು ಆತನ ಆರೋಗ್ಯ ಕೆಟ್ಟು ನಿಶಕ್ತನಾಗಿರುತ್ತಾನೆ ಎಂದರೆ ಸರಿ. ನನ್ನ ಗಂಡನ ಜೀವಿತ ಅವಧಿಯಲ್ಲಿ ಆತನ ಆಸ್ತಿಗಳಲ್ಲಿ ಪಾಲು ವಿಭಾಗ ಅಥವಾ ಜೀವನಾಂಶ ಕೇಳಲು ನನಗೆ ಯಾವುದೇ ಕಾನೂನು ಹಕ್ಕು ಇರುವುದಿಲ್ಲ ಅಂದರೆ ಸರಿಯಲ್ಲ.

ಸದರಿ ಶಸ್ತ್ರಚಿಕಿತ್ಸೆಗೆಂದು ಎದುರುದಾರನು ಬೇರೆಯವರ ಬಳಿ 04 ಲಕ್ಷ ರೂಪಾಯಿಗಳನ್ನು ಬೇಡಿ ಸಾಲ ಮಾಡಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತಾನೆ ಎಂದರೆ ಸಾಕ್ಷಿ ನಾನೇನೂ ಮಾಡಬೇಕು ಎಂದು ನುಡಿಯುತ್ತಾರೆ. ಎದುರುದಾರನಿಗೆ ಶಸ್ತ್ರಚಿಕಿತ್ಸೆಯ ನಂತರದಲ್ಲಿ ಔಷದೋಪಚಾರಕ್ಕೆ ಎಂದು ಪ್ರತಿತಿಂಗಳು ರೂ.3,000/- ಖರ್ಚು ವೆಚ್ಚ ಬರುತ್ತದೆ ಎಂದರೆ ನನಗೆ ಇದೆ ಎಂದು ನುಡಿಯುತ್ತಾರೆ. ಸದರಿ ಔಷದಿ ಇಲ್ಲದೇ ಇದ್ದರೆ ಎದುರುದಾರನು ಜೀವಕ್ಕೆ ಹಾನಿ ಇದೆ ಎಂದರೆ ನನ್ನ ಜೀವಕ್ಕೆ ಬೇಕು ಎಂದು ನುಡಿಯುತ್ತಾರೆ.

ಎದುರುದಾರನಿಗೆ 01 ಎಕ್ರೆ 04 ಗುಂಟೆ ಜಮೀನು ಹೊರತು ಪಡಿಸಿ ಬೇರೆ ಏನು ಇರುವುದಿಲ್ಲ ಎಂದರೆ ಸರಿ. ಸದರಿ ಜಮೀನು ಒಣಬೇಸಾಯ ಜಮೀನು ಎಂದರೆ ಸರಿ. ಮಳೆ ಇದ್ದಾಗ

ಮಾತ್ರ ಸದರಿ ಜಮೀನಿನಲ್ಲಿ ಹೊಲ ಬೆಳೆಯುತ್ತದೆ ಎಂದರೆ ಸರಿ. ಎದುರುದಾರನು ಹಾಸಿಗೆ ಹಿಡಿದಿರುತ್ತಾನೆ ಅಂದರೆ ನಾನು ಹಿಡಿದಿರುತ್ತೇನೆ ಎಂದು ನುಡಿಯುತ್ತಾರೆ.

ನನ್ನ ಮತ್ತು ಎದುರುದಾರನ ಆರೋಗ್ಯಕ್ಕೆ ವ್ಯತ್ಯಾಸ ಇದೆ ಎಂದರೆ ಸರಿ. ಎದುರುದಾರನು ನನಗಿಂತ ವಯಸ್ಸಿನಲ್ಲಿ ಎಷ್ಟು ದೊಡ್ಡವನು ಎಂದರೆ ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ನಾನು ಆತನ ಸಂಗಡ ವಾಸ ಮಾಡದೇ ಇದ್ದ ಕಾರಣ ನನಗೆ ಆತನ ವಯಸ್ಸು ಗೊತ್ತಿಲ್ಲ ಅಂದರೆ ಸರಿಯಲ್ಲ.

ಎದುರುದಾರನು ಹೊಲವನ್ನು ಅಡಮಾನ ಮಾಡಿ ಬ್ಯಾಂಕ ಆಪ್ ಬರೋಡಾದಲ್ಲಿ 03 ಲಕ್ಷ ರೂಪಾಯಿ ಸಾಲ ಪಡೆದುಕೊಂಡಿರುತ್ತಾನೆ ಎಂದರೆ ನಾನು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಎದುರುದಾರನು ಪಿ ಎಲ್ ಡಿ ಬ್ಯಾಂಕನಿಂದ 02 ಲಕ್ಷ ರೂಪಾಯಿ ಸಾಲ ಪಡೆದುಕೊಂಡಿರುತ್ತಾನೆ ಎಂದರೆ ಸಾಕ್ಷಿ ನನಗೂ ಸಾಲ ಬೇಕು ಎಂದು ನುಡಿಯುತ್ತಾರೆ.

ಎದುರುದಾರನಿಗೆ ಸಾಲ ಮತ್ತು ಜೀವನಾಂಶ ನೀಡಲು ಸಾಮರ್ಥ್ಯ ಇಲ್ಲಾ ಎಂದರೆ ಸರಿ.

ಸಾಮಾನ್ಯವಾಗಿ ಗಂಡನು ಅನಾರೋಗ್ಯದಿಂದ ಹಾಸಿಗೆ ಹಿಡಿದ ಸಮಯದಲ್ಲಿ ಹೆಂಡತಿಯು ಆತನ ಜೋಪಾನ ಜತನ ಮಾಡುವುದು ಹೆಂಡತಿಯ ಧರ್ಮ ಮತ್ತು ಕರ್ತವ್ಯ ಎಂದರೆ ಸಾಕ್ಷಿಯು ಆತನನ್ನು ನೋಡಿಕೊಳ್ಳಲು ಒಬ್ಬರು ಇರುತ್ತಾರೆ ಎಂದು ನುಡಿಯುತ್ತಾರೆ. ಸದರಿ ವಿಷಯವನ್ನು ನನ್ನ ಮುಖ್ಯ ಅರ್ಜಿಯಲ್ಲಿ ಅಥವಾ ದಾವೆಯಲ್ಲಿ ನಮೂದು ಮಾಡಿದ ಬಗ್ಗೆ ಕೇಳಲು ಸಾಕ್ಷಿಯು ನಾನು ಏಕೆ ನಮೂದು ಮಾಡಲಿ ಎಂದು ನುಡಿಯುತ್ತಾರೆ. ಎದುರುದಾರರನ್ನು ಜೋಪಾನ ಮಾಡಲು ಒಬ್ಬಳು ಇದ್ದ ಬಗ್ಗೆ ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ನನ್ನ ತವರೂ ಮನೆಯಲ್ಲಿ ನಾನು, ನನ್ನ ಮಗ, ನನ್ನ ಸೊಸೆ ಮತ್ತು ನನ್ನ ಮೊಮ್ಮಕ್ಕಳು ಕೂಡಿ ವಾಸ ಮಾಡುತ್ತಿದ್ದೇವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ಮಗ ಬೂದಪ್ಪನು ಬೆಂಗಳೂರಿಗೆ ಹೋಗಿರುತ್ತಾನೆ. ನನ್ನ ಮಗ ಬೂದಪ್ಪ ಇಂದು ನ್ಯಾಯಾಲಯಕ್ಕೆ ಬಂದಿರುತ್ತಾನೆ. ನನ್ನ ಮಗನು ಬೆಂಗಳೂರಿಗೆ ಹೋಗಿರುವ ಬಗ್ಗೆ ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ನನ್ನ ತವರೂ ಮನೆಯಲ್ಲಿ ನನ್ನ ತಂದೆಗೆ ಸೇರಿದ 04 ಎಕ್ರೆ ಹೊಲ ಆಸ್ತಿಗಳು ಇವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರು ಏಕೆ ನನಗೆ ಕೊಡಬೇಕು ಎಂದು ನುಡಿಯುತ್ತಾರೆ. ಸದರಿ ಹೊಲದಲ್ಲಿ ಹತ್ತಿ, ಜೋಳ, ಕಡಳೆ ಮುಂತಾದವು ಬೆಳೆಯುತ್ತಾರೆ. ಸದರಿ ಆಸ್ತಿಗಳು ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಸದರಿ ಹೊಲದಿಂದ ವಾರ್ಷಿಕ 05 ಲಕ್ಷ ರೂಪಾಯಿ ಉತ್ಪನ್ನ ಬರುತ್ತದೆ ಅಂದರೆ ನಾನು ಏಕೆ ಕೊಡಬೇಕು ಎಂದು ನುಡಿಯುತ್ತಾರೆ.

ನನ್ನ ಗಂಡನಿಗೆ ಅನಾರೋಗ್ಯದ ಕಾರಣ ದುಡಿಯುವ ಸಾಮರ್ಥ್ಯತೆ ಇಲ್ಲ ಎಂದರೆ ಸಾಕ್ಷಿಯು ನನಗೂ ಹೋಗಿದೆ ಎಂದು ನುಡಿಯುತ್ತಾರೆ.

ಸುಮಾರು 20 ವರ್ಷಗಳಿಂದ ನಾನು ಸ್ವಇಚ್ಛೆಯಿಂದ ನನ್ನ ತವರೂ ಮನೆಯಲ್ಲಿ ಇರುತ್ತೇನೆ ಎಂದರೆ ಸಾಕ್ಷಿಯು ತವರೂ ಮನೆಯಲ್ಲಿ ಈ ಕಾಲದಲ್ಲಿ ಯಾರು ನೋಡಿಕೊಳ್ಳುತ್ತಾರೆ ಎಂದು ನುಡಿಯುತ್ತಾರೆ. ನಾನು ಈಗ ಬೆಂತೂರುನಲ್ಲಿ ಬಾಡಿಗೆ ಮನೆಯಲ್ಲಿ ವಾಸವಿರುತ್ತೇನೆ. ಸದರಿ ಮನೆ ಮಾಲೀಕನ ಹೆಸರು ಕೆಂಚಪ್ಪ ಮುದಿಯಪ್ಪನವರ ಆಗಿರುತ್ತದೆ. ಬಾಡಿಗೆ ಇರುವುದಿಲ್ಲ ಅವರು ಅನುಕಂಪದ ಮೇಲೆ ದನ ಕಟ್ಟುವ ಕೊಠಡಿಯಲ್ಲಿ ವಾಸ ಮಾಡಲು ಬಿಟ್ಟಿರುತ್ತಾರೆ. ಸದರಿ ವಿಷಯಗಳನ್ನು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಸಾಮಾನ್ಯವಾಗಿ ಹಳ್ಳಿ ಜೀವನ ಅಂದರೆ ಹೊಲ ಮನೆ ಕೆಲಸ ಎಂದರೆ ಸರಿ. ಸಾಮಾನ್ಯವಾಗಿ ಹೊಲ ಕೆಲಸಕ್ಕೆ 02 ಪಾಳೆಗಳು ಇರುತ್ತವೆ. ಬೆಳಗ್ಗೆ ಒಂದು ಸಂಜೆ ಒಂದು ಎಂದರೆ ಸರಿ. ಸಾಮಾನ್ಯವಾಗಿ ಹೊಲದ ಮಾಲೀಕರು ತಮ್ಮ ವಾಹನಗಳಲ್ಲಿ ಹೊಲದಲ್ಲಿ ಕೆಲಸ ಮಾಡುವರಿಗೆ ಮನೆಯಿಂದ ಕರೆದುಕೊಂಡು ಹೋಗಿ ಕೆಲಸ ಮುಗಿದ ನಂತರದಲ್ಲಿ ವಾಹನದಲ್ಲಿ ಮನೆಗೆ ಬಿಡುತ್ತಾರೆ ಎಂದರೆ ನಾನೇನು ಮಾಡಬೇಕು ಎಂದು ನುಡಿಯುತ್ತಾರೆ.

ಸಾಮಾನ್ಯವಾಗಿ ಹೆಣ್ಣುಮಕ್ಕಳಿಗೆ ಮೊದಲನೇ ಪಾಳೆಗೆ 300/- ರೂ. ದಿನಕೂಲಿ ಮತ್ತು 2 ನೇ ಪಾಳೆಗೆ 150/- ರೂ ದಿನಕೂಲಿ ಕೊಡುತ್ತಾರೆ ಎಂದರೆ ಸಾಕ್ಷಿಯು 400/- ರೂಪಾಯಿ ಎಂದು ನುಡಿಯುತ್ತಾರೆ.

ನಾನು ಆರೋಗ್ಯದಿಂದ ಇದ್ದೇನೆ ಅಂದರೆ ಸರಿಯಲ್ಲ. ಸಾಕ್ಷಿಯು ನನ್ನ 02 ಕಾಲು ಹೋಗಿದೆ ಎಂದು ನುಡಿಯುತ್ತಾರೆ. ಸದರಿ ವಿಷಯದ ಬಗ್ಗೆ ನಾನು ವೈದ್ಯಕೀಯ ದಾಖಲೆಗಳನ್ನು

ಹಾಜರು ಪಡಿಸಿಲ್ಲ. ಸಾಕ್ಷಿಯು ಮುಂದುವರೆದು ದವಾಖಾನೆಗೆ ಹೋಗಲು ನನಗೆ ಹಣದ ಅವಶ್ಯಕತೆ ಇರುತ್ತದೆ ಎಂದು ನುಡಿಯುತ್ತಾರೆ. ನಾನು ವೈದ್ಯರ ಬಳಿ ಯಾವುದೇ ಸ್ಕ್ಯಾನಿಂಗ ಮಾಡಿ ವರದಿ ಪಡೆದುಕೊಂಡಿಲ್ಲ.

ನಾನು ಸಕಾರಣವಿಲ್ಲದೇ ಎದುರುದಾರನ ಜೊತೆಯನ್ನು ಬಿಟ್ಟು ತವರೂ ಮನೆಯಲ್ಲಿ ವಾಸ ಮಾಡಿ ಎದುರುದಾರನ ಅನಾರೋಗ್ಯದ ದಿನಗಳಲ್ಲಿ ಆತನ ಸಂಗಡ ಇರದೇ ನನ್ನ ವೈವಾಹಿಕ ಜೀವನದ ಧರ್ಮವನ್ನು ಪಾಲೀಸದೆ ಇದ್ದ ಕಾರಣ ಕಾನೂನು ಪ್ರಕಾರ ನನಗೆ ಜೀವನಾಂಶದ ಅರ್ಹತೆ ಇರುವುದಿಲ್ಲ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಎದುರುದಾರನು ನನ್ನನ್ನು ಜೋಪಾನ ಮಾಡಿ ಇಟ್ಟುಕೊಂಡಿಲ್ಲ ಎಂದು ನುಡಿಯುತ್ತಾರೆ. ನನ್ನ ಸ್ವಇಚ್ಚೆಯಿಂದ ಹೋದರು ಸಹ ನನ್ನ ತಪ್ಪನ್ನು ಮುಚ್ಚಿಹಾಕಲು ಎದುರುದಾರನು ನನ್ನನ್ನು ಜೋಪಾನ ಮಾಡುತ್ತಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ನನ್ನ ಮಗನಿಗೆ 22 ವರ್ಷ ವಯಸ್ಸು ಆಗಿರುತ್ತದೆ. ನನ್ನ ಮಗನ ವಿವಾಹದ ಖರ್ಚು ವೆಚ್ಚಗಳನ್ನು ಊರಿನ ಜನರಿಂದ ಮತ್ತು ಸಂಬಂದಿಕರಿಂದ ಕೇಳಿ ಮಾಡಿರುತ್ತೇನೆ. ಸದರಿ ವಿಷಯದ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ.

ಪ್ರಕರಣದಲ್ಲಿ ನಾನು ಸಲ್ಲಿಸಿದ ಕಲಂ 23 ರ ಅರ್ಜಿಯ ಲಗತ್ತು ಪ್ರಮಾಣ ಪತ್ರದ 3 ನೇ ಸಾಲಿನಿಂದ 11 ನೇ ಕಂಡಿಕೆಯಲ್ಲಿ ಬರೆದಿರುವ ವಿಷಯಗಳು ಸುಳ್ಳಿನಿಂದ ಕೂಡಿದೆ ಅಂದರೆ ಸರಿಯಲ್ಲ.

ಎದುರುದಾರನ ನೀರಾವರಿ ಜಮೀನಿನ ಬಗ್ಗೆ ಯಾವ ದಾಖಲೆಗಳನ್ನು ಹಾಜರು ಪಡಿಸಿದ್ದ ಬಗ್ಗೆ ಕೇಳಲು ಸಾಕ್ಷಿಯು ಎದುರುದಾರನಿಗೆ ನೀರಾವರಿ ಜಮೀನು ಎಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಎದುರುದಾರನಿಗೆ ಸಾಕಷ್ಟು ಆದಾಯ ಇದೆ ಎಂದು ತೋರಿಸಲು ನಾನು ಯಾವ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ ಎಂದರೆ ಸಾಕ್ಷಿಯು ನನ್ನ ಊಟ ಉಪಚಾರಕ್ಕೆ ಜೀವನ ನಡೆಸಲು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ.

ನಾನು ದುಡಿದು ಉಳಿಮೆ ಮಾಡಿ ಬಂದ ಉತ್ಪನ್ನದಿಂದ ಜೀವನ ಸಾಗಿಸಲು ಶಕ್ತಳಿರುತ್ತೇನೆ ಅಂದರೆ ಸರಿಯಲ್ಲ. ಎದುರುದಾರನಿಗೆ ದುಡಿಯುವಂತಹ ಸಾಮರ್ಥ್ಯತೆ ಇಲ್ಲ ಎಂದರೆ ಸರಿಯಲ್ಲ.

ನನ್ನ ಮಗನು ದುಡಿಯುವ ಕಾರಣ ಆತನಿಗೆ ಆದಾಯ ಇದೆ ಎಂದರೆ ಸರಿ.

ನಾನು ಎದುರುದಾರನಿಗೆ ತೊಂದರೆ ನೀಡುವ ದೂರುದ್ದೇಶದಿಂದ ಸದರಿ ಪ್ರಕರಣವನ್ನು ಸುಳ್ಳು ಮಾಹಿತಿಯ ಮೇರೆಗೆ ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲಾ.</u>

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)
**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**
**ನವಲಗುಂದ.**